ಕನ್ನಡದ ಅತ್ಯುತ್ತಮ ಕಥೆಗಾರ್ತಿಯರಲ್ಲೊಬ್ಬರಾದ ಜಯಶ್ರೀ ಕಾಸರವಳ್ಳಿ ಶಿವಮೊಗ್ಗದ ಕಾಸರವಳ್ಳಿ ಸಮೀಪದ ಕೇಸಲೂರಿನವರು. 'ತಂತಿ ಬೇಲಿಯ ಒಂಟಿ ಕಾಗೆ', 'ಚಿತ್ರಗುಪ್ತನ ಸನ್ನಿಧಿಯಲ್ಲಿ', 'ದಿನಚರಿಯ ಕಡೇ ಪುಟದಿಂದ' ಪ್ರಕಟಿತ ಕಥಾಸಂಕಲನಗಳು. ಉತ್ತಮ ಅನುವಾದಕರೂ ಆದ ಅವರು, ಮಾರ್ಕೆಸ್‌ನ ಕಥೆಗಳನ್ನು ಕನ್ನಡಕ್ಕೆ ತಂದಿದ್ದಾರೆ. ಇತ್ತೀಚಿನ ಅನುವಾದಿತ ಕೃತಿ, ಮಿಖಾಯಲ್ ಎಂಡ ಅವರ 'ಮೊಮೊ' ಮಕ್ಕಳ ಕಾದಂಬರಿ. 'ತುಲಿಕಾ' ಸಂಸ್ಥೆಗಾಗಿ ಮಕ್ಕಳ ಪುಸ್ತಕಗಳನ್ನು ಅನುವಾದಿಸಿದ್ದಾರೆ.

ಕುಡಿಯಬೇಕಿತ್ತು. ಬೆಳಿಗ್ಗೆ ಕಾಫಿ ಕುಡಿದು ರೂಢಿಯಿದ್ದ, ಅಪ್ಪಿತಪ್ಪಿಯೂ ಅಂಬಲಿ ಕುಡಿದು ಅರಿಯದ ನಂಗೆ ಆಕಾಶವೇ ಕಳಚಿ ಬಿದ್ದಂತೆ ಭಾಸವಾಗುತ್ತಿತ್ತು. ಬೆಳಿಗ್ಗೆ ಅಂಬಲಿ ಕುಡಿಯುವಾಗ ಒತ್ತರಿಸಿಕೊಂಡು ಬರುತ್ತಿದ್ದ ಮನೆಯ ನೆನಪು ರಾತ್ರಿ ಒಬ್ಬಳೇ ಮಲಗುವಾಗಲೂ ಅಷ್ಟಾಗಿ ಕಾಡುತ್ತಿರಲಿಲ್ಲ. ಎಂದಾದರೂ ಅಪರೂಪಕ್ಕೊಮ್ಮೆ ಉಪ್ಪಿಟ್ಟೋ, ಅವಲಕ್ಕಿಯೋ ಮಾಡುತ್ತಿದ್ದದ್ದು ಇತ್ತಾದರೂ ಅವೆಲ್ಲಾ ಅಪರೂಪದಲ್ಲಿ ಅಪರೂಪ. ಊಟಕ್ಕೂ ಅಷ್ಟೇ, ಒಂದು ದೊಡ್ಡ ತಪ್ಪಲೆ ತುಂಬಾ ಅನ್ನ, ಯಾವುದಾದರೂ ತರಕಾರಿಯ ಹುಳಿ. ಮೊದಲ ಒಂದೆರಡು ದಿನ ಅವಳು ಅಂಬಲಿಯನ್ನು ಹಿತ್ತಾಳೆ ಲೋಟಕ್ಕೆ ಹಾಕಿ, ತಟ್ಟೆಗೆ ಊಟ ಬಡಿಸಿದೆಷ್ಟೋ ಅಷ್ಟೇ. ಆಮೇಲಾಮೇಲೆ, 'ಅಡ್ಗೆಮನೇಲಿದೆ. ಹೋಗಿ ಬಡಿಸ್ಕೋ,' ಅಂತ ಹೇಳಿ ಒಳಾಂಗಳದ ಮೆಟ್ಟಿಲಲ್ಲಿ ಕುಳಿತು ಎಲ್ಲೋ ಅನ್ಯಮನಸ್ಕಳಾಗಿ ದಿಟ್ಟಿಸುತ್ತಾ ಗಂಟೆಗಟ್ಟಲೆ ಇರುತ್ತಿದ್ದದ್ದೇ ಹೆಚ್ಚು.

ಎಂದೂ ಒಬ್ಬಳೇ ಕುಳಿತು ಊಟ ಮಾಡಿ ರೂಢಿಯಿರದ ನನಗೆ ತಟ್ಟೆಗೆ ಅನ್ನ ಹುಳಿ ಬಡಿಸಿಕೊಂಡು ಒಂಟಿಯಾಗಿ ತಿನ್ನುವಾಗೆಲ್ಲಾ ಗಂಟಲುಬ್ಬಿ ಬಂದು ತಿನ್ನುವುದೇ ದುಸ್ಸಾಧ್ಯವೆನ್ನಿಸುತ್ತಿತ್ತು. ಮಾಡುವ ಒಂದು ಹುಳಿಯೂ ಸಾಧಾರಣ. ಅಂತಹ ರುಚಿಯೇನೂ ಇರುತ್ತಿರಲಿಲ್ಲ. ಅಮ್ಮ ಕಳುಹಿಸುತ್ತಿದ್ದ ತುಪ್ಪ, ಲಿಂಬೆಕಾಯಿ ಉಪ್ಪಿನಕಾಯಿ ಅಡುಗೆಮನೆ ಗೂಡಿನಲ್ಲಿ ಹಾಗೇ ಇರುತ್ತಿತ್ತು. ಅವಳು ಕುತೂಹಲಕ್ಕೂ ಅದನ್ನು ಮುಟ್ಟಿದ ಕುರುಹುಗಳಿರುತ್ತಿರಲಿಲ್ಲ. ಉಪ್ಪಿನಕಾಯಿಯಲ್ಲಿ ನೆಂಚಿಕ್ಕೊಂಡು ಉಕ್ಕಿ ಬರುವ ಕಣ್ಣೀರನ್ನು ಪ್ರಯಾಸದಿಂದ ತಡೆ ಹಿಡಿಯುತ್ತಾ ಊಟದ ಶಾಸ್ತ್ರ ಮಾಡಿ, ಊರಿನಿಂದ ತಂದಿದ್ದ ಚಿಕ್ಕ ಡಬ್ಬಿಯಲ್ಲಿ ಕಲೆಸಿದ ಅದೇ ನಾಲ್ಕು ತುತ್ತು ಹಾಕಿಕೊಂಡು ಕಾಲೇಜಿಗೆ ಹೋಗುವುದು ಹೇಗೊ ಅಭ್ಯಾಸವಾಗಿ ಹೋಯಿತು.

ಅವಳನ್ನು ಅಡುಗೆಮನೆಯಲ್ಲಿ ನಾನು ನೋಡುತ್ತಿದ್ದದ್ದು ಸಂಜೆಯ ಒಂದು ಹೊತ್ತಿನಲ್ಲಿ ಮಾತ್ರ. ನಾನು ಕಾಲೇಜಿನಿಂದ ಬಂದ ಮೇಲೆ. ಅವಳು ಅಡುಗೆಮನೆಯೊಳ ಹೊಕ್ಕು ಅಲ್ಲಿದ್ದ ಏಕೈಕ ಸೀಮೆಯೆಣ್ಣೆ ಸ್ಟೌವನ್ನು ಪಂಪ್ ಮಾಡಿ ಹೊತ್ತಿಸಿ, ನಮ್ಮಿಬ್ಬರಿಗೂ ಕಾಫಿ ಮಾಡಲು ನೀರಿಡುತ್ತಿದ್ದಳು. ಅವಳು ಕೊಡುವ ಕಾಫಿಯ ನಿರೀಕ್ಷೆಯಲ್ಲಿ ನಾನೂ ಗಂಟೆಗಟ್ಟಲೆ ಕಾಯುತ್ತಾ ಕೂತಿರುತ್ತಿದ್ದೆ. ಲಹರಿಯಲ್ಲಿದ್ದರೆ ಒಂದೆರಡು ಮಾತನಾಡುತ್ತಿದ್ದಳು. ಯಾರಾದರೂ ಗೆಳತಿಯರಾದರಾ... ಕಾಲೇಜು ಹೇಗಿದೆ... ಅಷ್ಟೇ. ಊರ ನೆನಪಾಗುತ್ತಾ... ಏನಾದರೂ ತಿಂಡಿತೀರ್ಥ ಮಾಡಿ ಕೊಡಲಾ... ಅವಳೂ ಕೇಳುತ್ತಿರಲಿಲ್ಲ... ಕೇಳಲು ನನಗೂ ಬರುತ್ತಿರಲಿಲ್ಲ.

ನೀರು ಕುದ್ದ ನಂತರ ಅದಕ್ಕೇ ಕಾಫಿಪುಡಿ ಹಾಕಿ, ಸುಮಾರು ಹೊತ್ತು ಕಾದು, ಆನಂತರ ಒಂದು ಪಾತ್ರೆ ಮೇಲೆ ಬಟ್ಟೆಯಿಟ್ಟು ಸೋಸುತ್ತಿದ್ದಳು. ಆ ಬಟ್ಟೆಯೋ ಕಾಫಿ ಸೋಸಿ ಸೋಸಿ, ಕರೆಗಟ್ಟಿ, ಮಣಕಲು ವಾಸನೆ ಹೊಡೆಯುತ್ತಿರುತ್ತಿತ್ತು. ಕೆಲವೊಮ್ಮೆ ಕಾಫಿಯ ಕಟು ವಾಸನೆ ಮೀರಿ ಬಟ್ಟೆಯ ಮಣಕಲು ವಾಸನೆಯೇ ಕಾಫಿಯಲ್ಲಿ ತೇಲಿ ಕುಡಿಯುವಾಗ ವಾಕರಿಕೆ ಬಂದಂತಾಗುತ್ತಿತ್ತು. ಆದರೆ ಹಸಿದ ಹೊಟ್ಟೆಗೆ ಅಷ್ಟೂ ಇರುತ್ತಿರಲಿಲ್ಲವಾದ್ದರಿಂದ ಗತಿಯಿಲ್ಲದೇ ಕುಡಿಯುತ್ತಿದ್ದೆ. ಕೆಲವೊಮ್ಮೆ ಅವಳು ಬೆರೆಸುವ ಹಾಲೂ ತಣ್ಣಗಿರುತ್ತಿದ್ದು ಕಲಗಚ್ಚೇ ಆಗಿರುತ್ತಿತ್ತು. ಮತ್ತೆ ಕೆಲವೊಮ್ಮೆ ಮಣಕಲು ವಾಸನೆ ಜೊತೆ ಸೀಮೆಯೆಣ್ಣೆ ವಾಸನೆಯೂ ಸೇರಿ, ಕುಡಿಯುತ್ತಿರುವುದೇನೆಂದು ಅರಿಯದಷ್ಟು ಗಬ್ಬುಮಯವಾಗಿರುತ್ತಿತ್ತು. ಅಂತಹ ಸಂದರ್ಭದಲ್ಲೆಲ್ಲಾ ಯಾಕೆಯೆಂದು ನಾನರಿಯೆ, ಹೊಟ್ಟೆಯಾಳದಿಂದ ದುಃಖವೊಂದು ಒತ್ತರಿಸಿಕೊಂಡು ಬರುತ್ತಿತ್ತು.

ಕ್ರಮೇಣ ನಂಗೆ ಆಯವ್ವನೇ ಅತ್ಯಂತ ಕುತೂಹಲದ